ಸಿಸಿನಂ. 42/2018

ಪಿಡಬ್ಲ್ಯೂ: 2

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>**

ಸಿಸಿ ನಂ. 42/2018

ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀಮತಿ ಲಕ್ಷ್ಮೀ |
| ತಂದೆಯ ಹೆಸರು | : | ರಾಮಾ ಗುನಗಾ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಮಹಿಳಾ ಎ ಎಸ್ ಐ ಗೋಕರ್ಣ ಪೋಲಿಸ್ ಠಾಣೆ |
| ವಾಸ್ತವ್ಯ | : | ಗೋಕರ್ಣ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 07-04-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ದಂಡ ಪ್ರಕ್ರೀಯೆ ಸಂಹಿತೆ ಕಲಂ 299 ರಡಿಯಲ್ಲಿ ಪಿರ್ಯಾದುದಾರರ ಪರವಾಗಿ :</u>**
**ಅವರ <u>ವಕೀಲರಿಂದ :</u>**

ನಾನು ಈಗ 6 ತಿಂಗಳಿಂದ ಗೋಕರ್ಣ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

2. ನಮ್ಮ ಮಾನ್ಯ ಪಿಐ ರವರು ಸಿಸಿ ನಂ. 42/2018 ರಲ್ಲಿಯ ಪ್ರೋಕ್ಲೆಮೇಶನ್ ಆಗಿತ್ತು . ನಮ್ಮ ಪಿಐ ರವರು ಉದ್ಘೋಷಣಾ ಜಾರಿಗಾಗಿ ನನ್ನನ್ನು ನೇಮಿಸಿದ್ದರು . ದಿಃ 23-01-2026 ರಂದು ಉದ್ಘೋಷಣಾ ಪ್ರಿತಿಯನ್ನು ನ್ಯಾಯಾಲಯದ ನೋಟಿಸ್ ಬೋರ್ಡಿಗೆ ಅಂಟಿಸಿರುತ್ತೇನೆ . ಭಟ್ಕಳದಲ್ಲಿರುವ ಆರೋಪಿಯಾದ ಸಮಿಉಲ್ಲಾ ಅಬೂಬ್ಬಕರ ಮೊಕ್ತೇಸರ್ ಇವರ ಮನೆಗೆ ಹೋಗಿರುತ್ತೇನೆ . ಮನೆಯಲ್ಲಿ ಯಾರು ಇರಲಿಲ್ಲ. ಮನೆಯ ಅಕ್ಕಪಕ್ಕದವರನ್ನು ಆರೋಪಿಯ ಬಗ್ಗೆ ಕೇಳಲಾಗಿ ಆರೋಪಿಯ ಬಗ್ಗೆ ಗೊತ್ತಿಲ್ಲ. ಕಳೆದ ಒಂದು ವರ್ಷದಿಂದ ಆ ವ್ಯಕ್ತಿ ಮನೆನ್ನು ಬಿಟ್ಟು ಹೋಗಿದ್ದಾರೆ ಎಂದು ತಿಳಿಸಿದರು . ಆಗ ನಾನು ಸಾರ್ವಜನಿಕರಿಗೆ ಆರೋಪಿಯ ವಿರುದ್ಧ ಆಗಿರುವ ಉದ್ಘೋಷಣೆಯ ಬಗ್ಗೆ ತಿಳಿಸಿರುತ್ತೇನೆ . ಇಬ್ಬರು

ಪಂಚರನ್ನು ನೇಮಕ ಮಾಡಿಕೊಂಡು ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 2.15 ರಿಂದ 3.15 ಗಂಟೆಯವರೆಗೆ ಮಾಡಿರುತ್ತೇನೆ ಹಾಗೂ ಉದ್ಘೋಷಣಾ ಪ್ರತಿಯನ್ನು ಆರೋಪಿಯ ಮನೆಯ ಗೋಡೆಗೆ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಅಂಟಿಸಿರುತ್ತೇನೆ . . ನಂತರ ಅಲ್ಲಿಂದ ಭಟ್ಕಳ ನ್ಯಾಯಾಲಯಕ್ಕೆ ಹೋಗಿ ಶಿರಸ್ತೇದಾರರಿಗೆ ವಿಷಯ ತಿಳಿಸಿ ನ್ಯಾಯಾಲಯದ ನೋಟಿಸ್ ಬೋರ್ಡಿಗೆ ಉದ್ಘೋಷಣಾ ಪ್ರತಿಯನ್ನು ಅಂಟಿಸಿರುತ್ತೇನೆ . ಅಲ್ಲಿಂದ ಭಟ್ಕಳ ಬಸ್ ನಿಲ್ದಾಣಕ್ಕೆ ಹೋಗಿ ಆರೋಪಿಯ ಬಗ್ಗೆ ವಿಚಾರಿಸಿ ಬಸ್ ನಿಲ್ದಾಣದ ನೋಟಿಸ್ ಬೋರ್ಡಿಗೆ ಉದ್ಘೋಷಣಾ ಪ್ರತಿಯನ್ನು ಅಂಟಿಸಿರುತ್ತೇನೆ .ನಂತರ ಠಾಣೆಗೆ ಬಂದು ವರದಿಯನ್ನು ನೀಡಿರುತ್ತೇನೆ . ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯತು .

ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ನಿಪಿ -9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು, ಪಂಚರಾದ ಮೊಕ್ತಾರ ಅಬುಬ ಮಹಮ್ಮದ್ ಮೊಕ್ತೇಸರ್ ಹಾಗೂ ಇರ್ಫಾನ್ ಶೇಖ್ ರವರ ಸಹಿಗಳನ್ನು ನಿಪಿ-9(ಬಿ) ಮತ್ತು ನಿಪಿ-9(ಸಿ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.